# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

| | | |
|---|---|---|
| ಸಂಖ್ಯೆ: ಸಕಾಇ(ವಿ)/ಹಾಉವಿ/ಸಲೆ/ಹಿಸ/24-25/ 1924<br>ಲಗತ್ತು: | ಬೆವಿಕಂ<br>BESCOM | ರವರ ಕಛೇರಿ<br>ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ)<br>ಬೆ.ವಿ.ಕಂ ಹಾರೋಹಳ್ಳಿ ಉಪವಿಭಾಗ ಹಾರೋಹಳ್ಳಿ<br>ದೂರವಾಣಿ ಸಂಖ್ಯೆ : 9449841648/ 27563222<br>ದಿನಾಂಕ:03.02.2025 |

ಇವರಿಗೆ,

M/S LORVEN GRANITES

PLOT NO.328 KIADB 2nd PHASE

HAROHALLI

ವಿಷಯ: ಆರ್.ಆರ್.ಸಂಖ್ಯೆ **KPUHT52** ಸ್ಥಾವರದ ವಿದ್ಯುತ್ ಸರಬರಾಜು ಕರಾರುಪತ್ರ ರದ್ದು ಪಡಿಸುವ ಮತ್ತು ವಿದ್ಯುತ್ ಕಂಬ, ತಂತಿ ಮತ್ತು ಇತರೆ ಸಾಮಗ್ರಿಗಳನ್ನು ಕಳಚುವ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ , ಈ ಮೂಲಕ ತಮಗೆ ತಿಳಿಯಪಡಿಸುವುದೇನೆಂದರೆ M/S LORVEN GRANITES ರವರ ಹೆಸರಿನ ನಿಮ್ಮ **KPUHT52** ವಿದ್ಯುತ್ ಸ್ಥಾವರಕ್ಕೆ ದಿನಾಂಕ: 01.02..2025 ಕ್ಕೆ ರೂ 252260/- ಗಳಷ್ಟು ವಿದ್ಯುತ್ ಬಾಕಿ ಉಳಿಸಿಕೊಂಡಿರುವ ಕಾರಣ 01.12.2024 ರಿಂದ ವಿದ್ಯುಚ್ಛಕ್ತಿ ಸರಬರಾಜನ್ನು ನಿಲ್ಲಿಸಲಾಗಿರುತ್ತದೆ. ಈ ತಿಳುವಳಿಕೆ ಪತ್ರದ ದಿನಾಂಕದಿಂದ 3 ತಿಂಗಳುಗಳ ಒಳಗಾಗಿ ಬಾಕಿಯನ್ನು ಪಾವತಿ ಮಾಡಿ ಕಾನೂನಿನ ರೀತಿ ವೈರಿಂಗ್ (ಸಮಾಪನ) ಪರೀಕ್ಷಾ ವರದಿ ಇತ್ಯಾದಿಗಳನ್ನು ನೀಡಿ ವಿದ್ಯುಚ್ಛಕ್ತಿ ಪುನರ್ ಸಂಪರ್ಕ ಪಡೆಯಬಹುದು. ತಪ್ಪಿದ್ದಲ್ಲಿ ವಿದ್ಯುಚ್ಛಕ್ತಿ ಸರಬರಾಜು ಮತ್ತು ವಿತರಣಾ ನಿಬಂಧನೆ 32.07 ಮತ್ತು 32.08 ರ ಪ್ರಕಾರ ನೀವು ಕಂಪನಿಯ ಜೊತೆ ಮಾಡಿಕೊಂಡಿರುವ ಕರಾರನ್ನು ರದ್ದು ಪಡಿಸಲಾಗುವುದು ಹಾಗೂ ನಿಮ್ಮ ಸ್ಥಾವರಕ್ಕೆ ಅಳವಡಿಸಿರುವ ವಿದ್ಯುತ್ತಿನ ಕಂಬ, ತಂತಿ, ಸರ್ವಿಸ್ ಮೈನ್ ಮತ್ತು ಮಾಪಕ ಮುಂತಾದ ಸಾಮಗ್ರಿಗಳನ್ನು ಕಳಚಿ ಹಿಂಪಡೆಯಲಾಗುವುದು. ನೀವು ಪಾವತಿ ಮಾಡಬೇಕಾದ ವಿದ್ಯುತ್ ಬಾಕಿಯ ಮೊತ್ತದ ಮೇಲೆ ಹಣ ಪಾವತಿಸುವ ವರೆಗೆ ಶಾಲಿಯಾನ ಶೇ. 12 ರಂತೆ ಬಡ್ಡಿಯನ್ನು ವಿಧಿಸಲಾಗುವುದು. ವಿದ್ಯುತ್ ಬಾಕಿಯನ್ನು ವಸೂಲಾತಿಗಾಗಿ ಕರ್ನಾಟಕ ಸರ್ಕಾರದ ಭೂ ಕಂದಾಯ ಅಧಿನಿಯಮ ಹಾಗೂ ನಿಬಂಧನೆಗಳ ಪ್ರಕಾರ ಕ್ರಮ ತೆಗೆದುಕೊಂಡು ವಿದ್ಯುತ್ ಬಾಕಿಯನ್ನು ಪಾವತಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು.

ಕರಾರನ್ನು ರದ್ದು ಮಾಡಿದ ಮೇಲೆ ಈ ಮೇಲ್ಕಂಡ ಸ್ಥಾವರಕ್ಕೆ ವಿದ್ಯುಚ್ಛಕ್ತಿ ಸರಬರಾಜು ಮಾಡಲು ಸಾಧ್ಯ ಇರುವುದಿಲ್ಲ ಎಂದು ಈ ಮೂಲಕ ತಮಗೆ ತಿಳಿಸಲಾಗಿದೆ.

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನ ಉಪ-ವಿಭಾಗ , ಬೆವಿಕಂ
ಹಾರೋಹಳ್ಳಿ

**ಪ್ರತಿಗಳು:**

1. ಸಹಾಯಕ ಇಂಜಿನೀಯರ್(ವಿ) ,ಕಾರ್ಯ ಮತ್ತು ಪಾಲನಾ ಘಟಕ, ಹಾರೋಹಳ್ಳಿ ರವರಿಗೆ ಸಲ್ಲಿಸುತ್ತಾ, ಸದರಿ ಸ್ಥಾವರದ ಸಾಮಗ್ರಿಗಳನ್ನು ತಿಂಗಳ ಅವಧಿ ಮುಗಿದ ನಂತರ ಕಳಚಿ ಉಗ್ರಾಣಕ್ಕೆ ಹಿಂತಿರುಗಿಸಿ ವಿವರಗಳನ್ನು ಕಂದಾಯ ಶಾಖೆಗೆ ಸಲ್ಲಿಸಲು ಸೂಚಿಸಲಾಗಿದೆ.
2. ಕಛೇರಿ ಕಡತ / ಮಹಾಕಡತ